# ಆಡಿದನೋ ರಂಗ ಅದ್ಭುತದಿಂದಲಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 40
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 157.
3. **Ref.:** Shri Purandara Dasara Sahitya Part – 4, Krishna Leela, edited by Shri Betageri Krishna Sharma and Shri Bengeri Huchhu Rayaru, page No. 97
4. **Ref.:** Lyrics mentioned without highlights are as per Ref. 1. The wordings in Ref. 2 are similar to Ref. 1. The wordings in Ref. 3 are slightly different and these differences are given in yellow highlights.
5. **Note:** Singer has followed lyrics as in Ref. 1.

ರಾಗ: ಆರಭಿ ತಾಳ: ಆದಿ

ಆಡಿದನೋ ರಂಗ ಅದ್ಭುತದಿಂದಲಿ
ಕಾಳಿಂಗನ ಫಣೆಯಲಿ || ಪ ||

ಪಾಡಿದವರಿಗೆ ಬೇಡಿದ ವರಗಳ
ನೀಡುತಲಿ ದಯಮಾಡುತಲಿ ನಲಿ-
ದಾಡುತಲಿ ಬೆಣ್ಣೆ ಬೇಡುತಲಿ ಕೃಷ್ಣ || ಅಪ ||

ಅಂಬುರುಹೋದ್ಭವ ಅಖಿಳ ಸುರರು ಕೂಡಿ
ಅಂಬರದಲಿ (ನಿಂತವರು) (ನಿಂತು ಅವರ್) ಸ್ತುತಿಸೆ
ರಂಭೆ ಊರ್ವಶಿ ರಮಣಿಯರೆಲ್ಲರು
ಚಂದದಿಂ ಭರತನಾಟ್ಯವ ನಟಿಸೆ
(ಝುಂತಟ ತಕಧಿಮಿ ತಧಿಗಿಣಿ ತೋಂ ಎಂದು) (ಝುಂತಕ ತಕಧಿಮಿ ತದಿಗಿಣತೋಂ ಎಂದು)
ಝುಂಪೆ ತಾಳದಿ ತುಂಬುರುನೊಪ್ಪಿಸೆ
(ಧಾಮ ಪ ಪಾ ಧ ಸ ರೀ ಎಂದು ಧ್ವನಿಯಿಂದ) (ಧಾಪಮಪಧಸರಿ ಎಂದು ಧ್ವನಿಯಿಂದ)
(ನಾರದ ತುಂಬುರರ್ಗಾನ ಮಾಡಲು) (ನಾರದ ತುಂಬುರು ಗಾನವ ಮಾಡಲು)
ನಂದಿಯು ಮದ್ದಲೆ ಚೆಂದದಿ ಹಾಕಲು || 1 ||

ಫಣವ ಮೆಟ್ಟಿ ಬಾಲವ ಕೈಯಲಿ ಪಿಡಿದು ಫಣಿಯ ಮೆಟ್ಟಿ ಬಾಲವ ಕೈಯಲಿ ಪಿಡಿದು
ಥಳಥಳಿಸುತ್ತ ನಾಟ್ಯವನಾಡೆ ಫಣಫಣಿಸುತ ನಾಟ್ಯವನಾಡೆ
ಚಂದ್ರ ಮಂಡಲದಂತೆ ಪೊಳೆಯುವ ಮುಖದೊಳು ದಿನಪ ಮಂಡಲದಂತೆ ಪೊಳೆಯುವ ಮುಖದೊಳು

| | |
|---|---|
| ಚಲಿಸುವ ನೀಲ ಕೇಶಗಳಾಡೆ | ಚಲಿಸುತ ನೀಲ ಕೇಶಗಳಾಡೆ |
| ಕಾಲಲಂದುಗೆ ಗೆಜ್ಜೆ ಘಲು ಘಲು ಘಲಿರೆನುತ | ಕಾಲಲಂದಿಗೆ ಗೆಜ್ಜೆ ಘಲು ಘಲು ಘಲು ಘಲು |
| ಉಡಿಗೆಜ್ಜೆ ಘಂಟೆಗಳಾಡೆ | ಘಲುರೆಂದು ಉಡಿಗೆಜ್ಜೆ ಘಂಟೆಗಳಾಡೆ |
| ದುಷ್ಟ ಕಾಳಿಂಗನ ಮೆಟ್ಟಿ ಭರದಿಂದ | ದುಷ್ಟ ಕಾಳಿಂಗನ ಮೆಟ್ಟಿ ಭರದಿಂದ |
| ಪುಟ್ಟ ಪಾದವ ಇಟ್ಟು ಶ್ರೀ ಕೃಷ್ಣನು | ಪುಟ್ಟ ಪಾದವನು ಇಟ್ಟ ಶ್ರೀ ಕೃಷ್ಣನು |
| ಮೆಟ್ಟಿದನು ತಕ ಧಿಮಿ ತಧಿಕೆನುತ ‖ 2 ‖ | ಮೆಟ್ಟಿದ ತದ್ಧಿಮಿ ತಧಿಗಣತೋಂ ಎಂದು |

ಸುರರು ಪುಷ್ಪದ ವೃಷ್ಟಿಯ ಕರೆಯಲು
ಸುದತಿಯರೆಲ್ಲರು ಪಾಡಲು
ನಾಗಕನ್ನಿಕೆಯರು ನಾಥನ ಬೇಡಲು
ನಾನಾ ವಿಧದಿ ಸ್ತುತಿ ಮಾಡಲು
ರಕ್ಕಸರೆಲ್ಲರು ಕಕ್ಕಸವನೆ ಕಂಡು
ದಿಕ್ಕು ದಿಕ್ಕುಗಳಿಗೆ ಓಡಲು
ಚಿಕ್ಕವನಿವನಲ್ಲ ಪುರಂದರ ವಿಠ್ಠಲ
ವೆಂಕಟರಮಣನ ಬೇಗ ಯಶೋದೆ
ಬಿಂಕದೊಳೆತ್ತಿ ಮುದ್ದಾಡೆ ಶ್ರೀ ಕೃಷ್ಣನ ‖ 3 ‖

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಕಾಳಿಂಗ ಮರ್ದನದ ಬಣ್ಣನೆಯ ಮತ್ತೊಂದು ರೀತಿಯನ್ನು ಈ ಹಾಡಿನಲ್ಲಿ ನೋಡಬಹುದು. ಇದರಲ್ಲಿ ಹೆಚ್ಚಾಗಿ ಶ್ರೀ ಕೃಷ್ಣನ ನರ್ತನದ ವಿವಿಧ ರೀತಿಗಳನ್ನು ವರ್ಣಿಸಲಾಗಿದೆ.

**ಅಂಬುರು ಹೋದ್ಭವ** – ಬ್ರಹ್ಮ.

**ಫಣವ** – ಹೆಡೆಯನ್ನು.

**ಕಕ್ಕಸ** – ಆಶ್ಚರ್ಯ; ಭಯಾನಕವಾದುದು.

**Classification:** Keerthane
**Ankita:** purandara vittala
**Location:** NA
**Category:** Krishna Leele, Navaratna Malike
**Sub-Category:** ranga, Krishna, kalinga, benne, sura, akasha, narada, nandi, kai Chandra, gejje, pushpa, srinivasa, Yashode,
**Pravachana:** NA
**Explanation:** NA